

ತನ್ನ ಬೆಂಬಲಕ್ಕೆ ನಿಲ್ಲುತ್ತಾಳೆ ಎಂದು ಅವನಿಗನ್ನಿಸಿತು. ಟೀವಿಯಲ್ಲಿ ಯಾವುದೋ ಧಾರಾವಾಹಿಯನ್ನು ನೋಡುತ್ತ ಕುಳಿತಿದ್ದ ಹೆಂಡತಿಯ ಕಡೆಗೆ ನೋಡಿದ. ಅವಳ ನಿರುಮ್ಮಳ ಮುಖ ನೋಡಿ ಧಡ-ಧಡಕ್ಕೆನ್ನುತ್ತಿದ್ದ ಅವನ ಹೃದಯ ಸ್ವಲ್ಪ ತಹಬದಿಗೆ ಬಂತು.

‘ಗೀತಾ, ಯಾರೋ ಬಂದು ನಮ್ಮ ಸೈಟಿನಲ್ಲಿ ಶೆಡ್ ಹಾಕ್ಬಿಟ್ಟಿದ್ದಾರಂತೆ’ ಎಂದು ಮೂರ್ತಿ ತನ್ನ ಆತಂಕವನ್ನು ಹಂಚಿಕೊಂಡ. ಟೀವಿಯಿಂದ ಮುಖ ತಿರುಗಿಸದ ಗೀತಾ, ‘ಸುತ್ತ -ಮುತ್ತ ಮನೆ ಕಟ್ಟಿದ್ದಾರೇನೋ?’ ಎಂದು ತಣ್ಣಗೆ ಕೇಳಿದಳು.

‘‘ಹೌದಂತೆ... ಮುಂದಿನ ಸೈಟಿನೋರು. ನಿನ್ನೆನೇ ಭಾವ ಹೋಗಿ, ‘ಯಾರನ್ನು ಕೇಳಿ ಕಟ್ಕೊಂಡ್ರಿ?’ ಅಂತ ಕೇಳಿದ್ದಕ್ಕೆ, ‘ಏನಾಯ್ತೀಗ? ಕೇಳಕ್ ನೀವೇನ್ ಓನರ್ರಾ?’